ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-4 Issue 3, Nov-Dec, 2022, Pp. 52-63.
©*IIMRD*, Mysuru.

IIMRD JOURNALS

www.iimrd.com

# ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳು– ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಗಳು

**ಶ್ರೀನಿವಾಸ ಮೂರ್ತಿ ಎ.ಟಿ* & ಡಾ. ದೊಡ್ಡಮನಿ ಲೋಕರಾಜ ಎ ಕೆ****

*ಸಂಶೋಧನಾ ವಿದ್ಯಾರ್ಥಿ, ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಕರ್ನಾಟಕ.

**ಸಹ ಪ್ರಾಧ್ಯಾಪಕರು, ಮುಖ್ಯಸ್ಥರು, ಸಮಾಜಶಾಸ್ತ್ರ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಜಗಳೂರು, ದಾವಣಗೆರೆ.

***ಸಾರಾಂಶ: (Abstract)***

*ಈ ಲೇಖನವು ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳ ಸಾಮಾಜಿಕ-ಆರ್ಥಿಕ ಅಂಶಗಳ ಮೇಲೆ ಕೇಂದ್ರೀಕರಿಸುತ್ತದೆ. ಮಕ್ಕಳು ಮುಗ್ಧರಾಗಿ ಹುಟ್ಟುತ್ತಾರೆ; ಆದಾಗ್ಯೂ, ಅನೇಕ ಅಂಶಗಳಿಂದಾಗಿ, ಅನೇಕ ಮಕ್ಕಳು ಅಪರಾಧಿಗಳಾಗಿ ಮತ್ತು ಕೆಲವೊಮ್ಮೆ "ಕಾನೂನಿನ ಘರ್ಷಣೆ" ಎಂದು ವ್ಯಾಖ್ಯಾನಿಸಲಾದ ನಡವಳಿಕೆಗಳನ್ನು ಅಳವಡಿಸಿಕೊಳ್ಳುತ್ತಾರೆ. ಈ ನಡವಳಿಕೆಗಳು ಭಾವನಾತ್ಮಕ ಪ್ರಕೋಪ, ಕ್ಷುಲ್ಲಕ ಕಳ್ಳತನಗಳು, ಮಾದಕ ವ್ಯಸನ, ಹಿಂಸಾತ್ಮಕ ಅಥವಾ ಆಕ್ರಮಣಕಾರಿ ನಡವಳಿಕೆಯಿಂದ ಹೆಚ್ಚು ಗಂಭೀರವಾದ ಅಪರಾಧಗಳವರೆಗೆ ಇರುತ್ತದೆ. ಈ ನಡವಳಿಕೆಗಳನ್ನು ಸಾಮಾನ್ಯವಾಗಿ ಜೀವನದ ಆರಂಭದಲ್ಲಿ ಕಲಿಯಲಾಗುತ್ತದೆ. ಪೋಷಕರು, ಕುಟುಂಬ ಸದಸ್ಯರು ಮತ್ತು ಮಕ್ಕಳನ್ನು ಕಾಳಜಿ ವಹಿಸುವ ಇತರರು ಹಿಂಸೆಯನ್ನು ಬಳಸದೆ ಅವರ ಭಾವನೆಗಳನ್ನು ನಿಭಾಯಿಸಲು ಕಲಿಯಲು ಸಹಾಯ ಮಾಡಬೇಕಾಗುತ್ತದೆ. ಬಲವಾದ ಬಂಧಗಳ ಮೂಲಕ ಮಕ್ಕಳು ಸಮಾಜದ ರೂಢಿಗಳನ್ನು ಆಂತರ್ಗತಗೊಳಿಸಿಕೊಳ್ಳುತ್ತಾರೆ ಎಂದು ಅಧ್ಯಯನಗಳು ತೋರಿಸುತ್ತವೆ. ಮಗುವು ಶುದ್ಧತೆ ಮತ್ತು ಮುಗ್ಧತೆಯೊಂದಿಗೆ ಜನಿಸುತ್ತದೆ. ಪ್ರತಿ ಮಗುವಿನ ಜೀವನದಲ್ಲಿ ಮಗುವನ್ನು ಪೋಷಿಸುವುದು ನಿರ್ಣಾಯಕವಾಗಿದೆ ಮತ್ತು ಆ ಮಗು ರಚನಾತ್ಮಕ ರೀತಿಯಲ್ಲಿ ಬೆಳೆದ ನಂತರ ಸರಿಯಾದ ರೀತಿಯಲ್ಲಿ ಸರಿಯಾದ ಕಾಳಜಿ ಮತ್ತು ಗಮನವನ್ನು ನೀಡಿದರೆ ಮಕ್ಕಳ ಸುತ್ತಮುತ್ತಲಿನ ವಾತಾವರಣವು ಧನಾತ್ಮಕವಾಗಿ ಮತ್ತು ಅವರಿಗೆ ಬೆಂಬಲವಾಗಿದ್ದಾಗ ಮಕ್ಕಳು ಉತ್ತಮ ಕಾರ್ಯಕ್ಷಮತೆಯನ್ನು ತೋರಿಸುತ್ತಾರೆ. ಮಕ್ಕಳ ದೈಹಿಕ, ಮಾನಸಿಕ, ನೈತಿಕ ಮತ್ತು ಆಧ್ಯಾತ್ಮಿಕ ಬೆಳವಣಿಗೆಯು ಅವರ ಸಾಮರ್ಥ್ಯಗಳನ್ನು ಅರ್ಥಮಾಡಿಕೊಳ್ಳಲು ಸಮರ್ಥರಾಗುವಂತೆ ಮಾಡುತ್ತದೆ. ಮತ್ತೊಂದೆಡೆ, ಹಾನಿಕಾರಕ ಪರಿಸರ, ಮೂಲಭೂತ ಅಗತ್ಯಗಳ ಕೊರತೆ, ಕಳಪೆ ಪೋಷಕರ ಮೇಲ್ವಿಚಾರಣೆ, ಇತರ ಅಂಶಗಳು ಮಗುವನ್ನು ಅಪರಾಧ ಅಥವಾ ಕಾನೂನಿನ ಸಂಘರ್ಷಕ್ಕೆ ಪರಿವರ್ತಿಸಬಹುದು. ಭಾರತದಲ್ಲಿ, ಮಕ್ಕಳ ಅಪರಾಧವು ಕಾನೂನಿನಲ್ಲಿ ಸಂಘರ್ಷ ಹೊಂದಿರುವ ಮಕ್ಕಳ ಮೇಲೆ ಪರಿಣಾಮ ಬೀರುವ ಸಾಮಾಜಿಕ ಸಮಸ್ಯೆಗಳಲ್ಲಿ ಒಂದಾಗಿದೆ ಆದರೆ ಇದು ಕುಟುಂಬಗಳು, ಸಮುದಾಯಗಳು ಮತ್ತು ಸಮಾಜದ ಮೇಲೆ ಪರಿಣಾಮ ಬೀರುತ್ತದೆ ಹಾಗೂ ಮಕ್ಕಳ ಕ್ರಿಮಿನಲ್ ನಡವಳಿಕೆಯು ಕುಟುಂಬವನ್ನು ನೋಯಿಸುತ್ತದೆ.*

***ಮುಖ್ಯಪದಗಳು: (Keywords)*** *ಸಾಮಾಜಿಕ, ಆರ್ಥಿಕ, ಮಕ್ಕಳು, ಕಾನೂನು, ಸಂಘರ್ಷ.*

*Please cite this article as: ಡಾ. ದೊಡ್ಡಮನಿ ಲೋಕರಾಜ ಎ. ಕೆ. & ಶ್ರೀನಿವಾಸ ಮೂರ್ತಿ ಎ.ಟಿ.* (2022). ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳು– ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಗಳು. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 4(3). ಪು.ಸಂ. 52–63.*

**ಪೀಠಿಕೆ**

ಮಕ್ಕಳು ಮಾನವೀಯತೆಯ ಪ್ರತಿಬಿಂಬ ಮತು ಒಂದು ದೇಶದ ಉತ್ತಮ ಆಸ್ತಿ ಇದ್ದಂತೆ. ಮಕ್ಕಳು ಅತ್ಯಮೂಲ್ಯ ಮಾನವ ಸಂಪನ್ಮೂಲವಿದ್ದಂತೆ. ಅಮೂಲ್ಯವಾಗಿದ್ದರೂ ದುರ್ಬಲರಾಗಿರುತ್ತಾರೆ. ಅವರನ್ನು ಉತ್ತಮ ಸಮಾಜದಲ್ಲಿ ಕಾಳಜಿಯಿಂದ ಸಂರಕ್ಷಿಸಬೇಕಾದ, ಬೆಳಸಬೇಕಾದ ಅಗತ್ಯವಿದೆ. ಮಕ್ಕಳು ನಾಳಿನ ಭರವಸೆಯ ಸಂಕೇತವೆಂದು ಕರೆಯಲಾಗುವುದು. ಸಾಮಾಜಿಕ ಬೆಳವಣಿಗೆಯ ಹಾಗೂ ಮಾನವೀಯತೆಯ ಮೊಗ್ಗುಗಳಿದ್ದಂತೆ. ಇಂದಿನ ಮಕ್ಕಳಿಗೆ ತಮ್ಮ ಸಾಮಾಜಿಕ ಮತ್ತು ದೈಹಿಕ ಆರೋಗ್ಯಕ್ಕೆ ಅನೂಕೂಲಕರವಾದ ಪರಿಸರಕ್ಕೆ ಭರವಸೆಯ ಬೆಳಕು ನೀಡದ ಹೊರತು ನಾಳೆಯ ಜವಬ್ದಾರಿಯುತ ಮತ್ತು ಉತ್ಪಾದಕ ಸದಸ್ಯರಾಗಿ ಬೆಳೆಯಲು ಸಾಧ್ಯವಿಲ್ಲ. ನಮ್ಮ ಭಾರತೀಯ ಸಂಸ್ಕೃತಿಲ್ಲಿಯೇ ಮಕ್ಕಳ ಬಗೆಗಿನ ಮಾನವತಾವಾದ ದೃಷ್ಟಿಕೋನವು ಅಡಗಿದೆ.

ಬಡತನ, ಭಗ್ನ ಕುಟುಂಬಗಳು, ಕೌಟುಂಬಿಕ ಒತ್ತಡ, ಭಾವನಾತ್ಮಕ ದುರ್ಬಳಕೆ, ಗ್ರಾಮೀಣ–ನಗರ ವಲಸೆ, ಸಾಮಾಜಿಕ ಮೌಲ್ಯಗಳು ಮುರಿದು ಬಿದ್ದಿರುವ ಸ್ಥಿತಿ, ಪೋಷಕರ/ರಕ್ಷಕರ ದುರ್ಬಳಕೆ, ದೋಷಪೂರಿತ ಶಿಕ್ಷಣ, ಮೊದಲಾದ ಪರಿಸ್ಥಿತಿಗಳು ಹೇಗೆ ಮಕ್ಕಳು ಅಪರಾಧಿ ಕೃತ್ಯಗಳಲ್ಲಿ ಹಾಗೂ ದುರ್ವತನೆಗಳ ಪರಿಸ್ಥಿತಿಗಳಿಗೆ ಸಿಲುಕುತ್ತಾರೆ ಎಂಬುದನ್ನು ಅಧ್ಯಯನ ಮಾಡಬೇಕಾಗಿದೆ. ಕುಟುಂಬ, ಸಮುದಾಯ, ಸಮಾಜ, ಪೋಷಕರಿಂದ ನಿರ್ಲಕ್ಷ್ಯಕ್ಕೆ ಒಳಗಾದ ಮಗುವಿನ ದೈಹಿಕ, ಮಾನಸಿಕ ಬೆಳವಣಿಗೆ ಹಾಗೂ ಸಮಗ್ರ ಬೆಳವಣಿಗೆಗಳ ಮೇಲೆ ಹಾನಿಕಾರಕ ಪರಿಣಾಮವನ್ನು ಬೀರುತ್ತವೆ. ಅಪರಾದಕ್ಕೆ ಕಾರಣವಾಗುವ ಹೆಚ್ಚಿನ ಅಂಶಗಳು ಭಾರತೀಯ ಸನ್ನಿವೇಶದಲ್ಲಿಯೇ ಸಾಕಷ್ಟು ಪ್ರಮಾಣದಲ್ಲಿ ಕಂಡುಬರುತ್ತವೆ. ಅವುಗಳನ್ನು ತಡೆಯುವ ಯಾವುದೇ ಪ್ರಯತ್ನ ಫಲಪ್ರದವಾಗುವುದು.

ಮಕ್ಕಳನ್ನು ಸೆರೆಮನೆ/ಜೈಲಿನಲ್ಲಿ ಬಂಧಿಸಿಡುವುದು ಸರಿಯಲ್ಲ. ಬದಲಾಗಿ ಅವರು ಎಲ್ಲಾ ಮಕ್ಕಳಂತೆ ಶಾಲೆಗೆ ಹೋಗಬೇಕು ಆಟ–ಪಾಠಗಳನ್ನು ಕಲಿತುಕೊಂಡು ಬಾಲ್ಯತ್ವವನ್ನು ಅನುಭವಿಸಿ ಆನಂದಿಸಬೇಕಾಗಿದೆ. ಆದರೆ ಕನಿಷ್ಟ ಒಂದು ಮಿಲಿಯನ್ನಿಂತಲೂ ಹೆಚ್ಚು ಮಕ್ಕಳು ಮತ್ತು ಯುವಕರು ಮುಚ್ಚಿದ ಸಂಸ್ಥೆಗಳು, ಬೂತ್‌ಕ್ಯಾಂಪಗಳು, ಬಂಧನ ಕೇಂದ್ರಗಳು ಹಾಗೂ ಕಾರಾಗೃಹಗಳಲ್ಲಿ ಬಂಧಿಸಟ್ಟಿರುವುದು ವಿಪರ್ಯಾಸ. ಹೌದು ಯಾವ ಕಾರಣದಿಂದಾಗಿ ಮಕ್ಕಳು ಇಂತಹ ಪರಿಸ್ಥಿತಿಗಳಿಗೆ ಬಲಿಪಶುವಾಗಿದ್ದಾರೆ? ಅವರು ತೊಂದರೆಗೊಳಗಾಗಿರುವುದರಿಂದ ಬೀದಿಗಳಲ್ಲಿ ವಾಸಿಸುತ್ತಿದ್ದಾರೆ.

ಕಾನೂನಿನೊಂದಿಗೆ ಘರ್ಷಣೆಯಲ್ಲಿ ಸಿಲುಕಿದ್ದಾರೆ. ಮಕ್ಕಳು ಅವರ ಪೋಷಕರಿಂದ ನಿರ್ಲಕ್ಷಕ್ಕೆ ಒಳಗಾಗಿ ಅವರ ಆರೈಕೆ ಮತ್ತು ಪೋಷಣೆಯಿಂದ ವಂಚಿತರಾಗಿದ್ದಾರೆ. ಇಂತಹ ಮಕ್ಕಳು ತಮ್ಮ ಕುಟುಂಬದಿಂದ, ಪೋಷಕರಿಂದ, ಸಮುದಾಯ ಹಾಗೂ ಸಮಾಜದಿಂದ ಹೋರಗೆ ಇರುವ, ಪರಿಸ್ಥಿತಿಗಳಿಗೆ ಒಳಗಾಗಿದ್ದಾರೆ. ಯಾವುದೇ ದೇಶದಲ್ಲಿ ಮಕ್ಕಳು ಭವಿಷ್ಯದ ನಿರ್ಮಾತೃಗಳು, ಹಾಗೂ ಭವಿಷ್ಯದ ನಾಯಕರು, ಹಾಗೂ ಆಯಾ ದೇಶದ ಸಂಪತ್ತು ಅಗಿದ್ದಾರೆ ಅವರನ್ನು ರಕ್ಷಿಸುವ, ಪೋಷಿಸುವ ಜವಬ್ದಾರಿ ಇಡೀ ಸಮಾಜದ ಮೇಲೆ ಇರುತ್ತದೆ. ಒಂದು ದೇಶದ ಸಾಮಾಜಿಕ, ಮತ್ತು ಸಾಂಸ್ಕೃತಿಕ, ಸನ್ನಿವೇಶಕ್ಕೆ ಅನುಗುಣವಾಗಿ ಮಕ್ಕಳ ವ್ಯಕ್ತಿತ್ವ ಮತ್ತು ಸಾಮರ್ಥ್ಯಗಳು ವೃದ್ದಿಗೋಳ್ಳುತ್ತವೆ. ಈ ಅವಧಿಯಲ್ಲಿ ಅವರಿಗೆ ಸರಿಯಾದ ರೀತಿಯಲ್ಲಿ ಪೋಷಕರಿಂದ, ನೆರೆಹೊರೆ, ಗೆಳೆಯರ ಬಳಗದಿಂದ ಸಾಮಾಜೀಕರಣ ಪ್ರಕ್ರಿಯೆಗಳ

ಸರಿಯಾಗಿ ನಡೆಯದಿದ್ದರೆ ಮಕ್ಕಳು ಸಮಾಜದ, ನೆಲದ ಕಾನೂನುಗಳನ್ನು ಉಲ್ಲಂಘಿಸುವ ಮೂಲಕ ಎಳೆಯ, ಹದಿಹರೆಯದ ಹಂತದಲ್ಲಿಯೇ ಸಮಾಜ ವಿರೋಧಿ ಕೃತ್ಯದಲ್ಲಿ ತೊಡಗಿಕೊಂಡು ಅಪರಾದಿಗಳಾಗಿ ಹೊರಹೊಮ್ಮುತ್ತಾರೆ. ಯಾವಾಗ ಅಪರಾಧಿ ಪ್ರವೃತ್ತಿಗಳು ಮಕ್ಕಳಲ್ಲಿ ಹೆಚ್ಚಾದಾಗ ಸಮಾಜದಲ್ಲಿ ಕಾನೂನು ಹಾಗೂ ಸುವ್ಯವಸ್ಥೆ ಹಾಳಾಗುತ್ತದೆ. ಇದು ಸಮಾಜದ ಮೇಲೆ ಪ್ರಭಾವ ಬೀರಿ ಅಭಿವೃದ್ದಿಗೆ–ಬೆಳವಣಿಗೆಗೆ ಮಾರಕವಾಗುತ್ತದೆ.

ಭಾರತವು ವಿಶ್ವದಲ್ಲೇ ಹೆಚ್ಚು ಮಕ್ಕಳನ್ನು ಹೊಂದಿದೆ. ಭಾರತವು ಮಕ್ಕಳಿಗಾಗಿ ರಾಷ್ಟ್ರೀಯ ಮಕ್ಕಳ ನೀತಿಯನ್ನು ಹೊಂದಿದ್ದು, ಇದು ಮಕ್ಕಳನ್ನು ರಾಷ್ಟ್ರೀಯ ಆಸ್ತಿ ಎಂದು ಘೋಷಿಸುತ್ತದೆ. ಆದರೂ, ಭಾರತೀಯ ಮಕ್ಕಳು ಕಷ್ಟದ ಪರಿಸ್ಥಿತಿಯಲ್ಲಿದ್ದಾರೆ. ಮಕ್ಕಳ ಅಪರಾಧಗಳಿಗೆ ಸಾಮಾಜಿಕ, ಆರ್ಥಿಕ, ಮಾನಸಿಕ ಅಂಶಗಳು ಹಾಗೂ ಇತರೆ ಅಂಸಶಗಳು ಕಾರಣಗಳಾಗಿವೆ. ಅಂದರೆ ಮನೆ ಮತ್ತು ಹೊರಗಿನ ಪರಿಸರ, ಅನಿಯಂತ್ರಿತ ಜನಸಂಖ್ಯೆ, ಬಡತನ, ಮಾಧ್ಯಮಗಳ ಕೆಟ್ಟ ಪರಿಣಾಮ, ಟಿ.ವಿ. ಕಂಪ್ಯೂಟರ್ ಮತ್ತು ಮೊಬೈಲ್ ಪೋನ್‌ಗಳು ಹಲವಾರು ಅಂಶಗಳು ಮಕ್ಕಳ ದೈನಂದಿನ ಜೀವನದ ಮೇಲೆ ಪರಿಣಾಮ ಬೀರುತ್ತವೆ.

**ಅಧ್ಯಯನದ ಉದ್ದೇಶಗಳು**

- ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳ ಅರಾಧಿಗಳ ವೈಯಕ್ತಿಕ ಮತ್ತು ಕುಟುಂಬದ ಹಿನ್ನೆಲೆಯ ಒಳನೋಟಗಳನ್ನು ಗುರುತಿಸುವುದು.
- ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಬಾಲಾಪರಾಧಿಗಳ ಸಾಮಾಜಿಕ–ಆರ್ಥಿಕ ಸ್ಥಿತಿಗಳ ಬಗ್ಗೆ ಒಳನೋಟಗಳನ್ನು ಗುರುತಿಸುವುದು.
- ಅಪರಾಧ ಎಸಗಿದ/ಆರೋಪ ಹೊತ್ತಿರುವ ಮಕ್ಕಳ ಕುಟುಂಬ ಮತ್ತು ಇತರ ಏಜೆನ್ಸಿಗಳ ಪಾತ್ರವನ್ನು ವಿಶ್ಲೇಷಿಸುವುದು.

**ಅಧ್ಯಯನದ ವಿಧಾನಗಳು**

ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳ ಸಾಮಾಜಿಕ, ಆರ್ಥಿಕ ಪರಿಸ್ಥಿತಿಗಳು ಎಂಬ ವಿಷಯಕ್ಕೆ ಸಂಬಂಧಿಸಿದಂತೆ ಬೆಂಗಳೂರು ನಗರ ಜಿಲ್ಲೆಯ ಪರಿವೀಕ್ಷಣಾ ಗೃಹಗಳ ಅಧ್ಯಯನ ಮಾಡಿ ವಿಷಯಕ್ಕೆ ಸಂಬಂಧಿಸಿದಂತೆ ಈ ವಿಧಾನಗಳನ್ನು ಅನುಸರಿಸಿ ಅಧ್ಯಯನ ಕೈಗೊಳ್ಳಲಾಗಿದೆ. ಪ್ರಾಥಮಿಕ ಮಾಹಿತಿ ಮೂಲಗಳಾದ ಅವಲೋಕನ, ಸಂದರ್ಶನ, ಪ್ರಶ್ನಾವಳಿ, ಗುಂಪು ಚರ್ಚೆ, ಕ್ಷೇತ್ರ ಕಾರ್ಯ ಮುಂತಾದ ಸಂಶೋಧನಾ ತಂತ್ರಗಳನ್ನು ಬಳಸಿ ಅಗತ್ಯ ದತ್ತಾಂಶವನ್ನು ಸಂಗ್ರಹಿಸಲಾಗಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರಿ ಹಾಗೂ ಖಾಸಗಿ ಸಂಸ್ಥೆಗಳಿಂದ ಪ್ರಕಟಿಸಲ್ಪಟ್ಟ–ಪ್ರಕಟಿಸಿರದ ಮಾಹಿತಿಯ ಮೂಲಗಳಾದ ಗ್ರಂಥಗಳು, ಪುಸ್ತಕಗಳು, ನಿಯತಕಾಲಿಕೆಗಳು, ಪ್ರಬಂಧಗಳು, ಲೇಖನಗಳು, ವೃತ್ತಪತ್ರಿಕೆಗಳು, ಅಧಿಕೃತ ವರದಿಗಳು, ಅಂಕಿಸಂಖ್ಯೆಗಳು, ವೆಬ್ ಜಾಲತಾಣಗಳು ಮೊದಲಾದ ಮೂಲಗಳಿಂದ ನಿರ್ದಿಷ್ಟ, ನಿಖರ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

**ಪರಿಕಲ್ಪನಾತ್ಮಕ ಹಿನ್ನೆಲೆ**

ಬಾಲಾಪರಾಧ ಎಂಬ ಪರಿಕಲ್ಪನೆ **'**Juvenile delinquency**'** ಎಂಬ ಅಂಗ್ಲ ಭಾಷೆಯ ಅನುವಾದವಾಗಿದೆ. **'**Delinquency' ಎಂಬ ಪದ **'**delinquere**'** ಲ್ಯಾಟಿನ್ ಭಾಷೆಯಿಂದ ಬಂದ ಪದವಾಗಿದ್ದು 'ತ್ಯಜಿಸು' (abandon) ಎಂದರ್ಥ. Juvenile ಎಂದರೆ ವಯಸ್ಕ ಹಂತವನ್ನು ತಲುಪದಿರುವ ಹಂತ, ಅಪ್ರಬುದ್ಧ ವಯಸ್ಸಿನ ವ್ಯಕ್ತಿ ಎಂದರ್ಥ. ಒಂದು ದೇಶದ, ನೆಲದ ಕಾನೂನಿನ ಪ್ರಕಾರ ನಿರ್ದಿಷ್ಟ ವಯಸ್ಸನ್ನು ದಾಟಿರದೆ ಎಸಗಿದ ಅಪರಾಧ ಕೃತ್ಯ ಎಂದಾಗುತ್ತದೆ.

ಸಿರಿಲ್ ಬರ್ಟ್ ಹೇಳುವಂತೆ "ಸಮಾಜ ಕಂಟಕ ಪ್ರವೃತ್ತಿ ಎಂದೆನಿಸಿ ಆತನನ್ನು ಕಾನೂನು ಕ್ರಮಕ್ಕೊಳಪಡಿಸಬೇಕೆಂದು ಕಂಡು ಬಂದಾಗ ಅದು ಬಾಲಾಪರಾಧ ಎನಿಸಿಕೊಳ್ಳುವುದು.

ಸಿ.ಬಿ. ಮೆಮೊರಿಯ ರವರ ಪ್ರಕಾರ ಸಾಮಾಜಿಕ ವ್ಯವಸ್ಥೆಯ ನಿಯಮಗಳು ಮತ್ತು ನಿರೀಕ್ಷೆಗಳನ್ನು ಉಲ್ಲಂಘಿಸುವ ಮಕ್ಕಳ ಯಾವುದೇ ಬಗೆಯ ನಡತೆಯ ವಿಧಾನವನ್ನು ಬಾಲಾಪರಾಧ ಒಳಗೊಂಡಿರುವುದು.

**ಪರಿಕಲ್ಪನೆಯ ಮರು ವ್ಯಾಖ್ಯಾನ**

ಬಾಲ ನ್ಯಾಯ ಕಾಯ್ದೆ 2015ರಲ್ಲಿ ಬಾಲಾಪರಾಧಿ ಎಂಬ ಪರಿಕಲ್ಪನೆಯನ್ನು ತೆಗೆದು ಮರು ವ್ಯಾಖ್ಯಾನಿಸಲಾಗಿದೆ. "ಬಾಲಾಪರಾಧಿ" ಎಂಬ ಪದ/ಪರಿಕಲ್ಪನೆಯ ಬದಲಾಗಿ 'ಮಗು' ಅಥವಾ "ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳು" ಎಂದು ನಾಮಕರಣ ಮಾಡಲಾಗಿದೆ. "ಬಾಲಾಪರಾಧಿ" ಎಂಬ ಪದ/ಪರಿಕಲ್ಪನೆಯಲ್ಲಿರುವ ಋಣಾತ್ಮಕ ಅರ್ಥವನ್ನು ತೆಗೆದು ಹಾಕುವ ಸಲುವಾಗಿ ಜೆ ಜೆ ಆಕ್ಟ್– 2015ನಲ್ಲಿ ಪ್ರಸ್ತಾಪಿಸಲಾಗಿದೆ.

ಬಾಲ ನ್ಯಾಯ ಕಾಯ್ದೆ 2015ರಲ್ಲಿ ಎರಡು ದೃಷ್ಟಿಕೋನದಲ್ಲಿ ಮಗು ಅಥವಾ ಮಕ್ಕಳು ಎಂಬ ಪರಿಕಲ್ಪನೆಯನ್ನು ಅರ್ಥೈಸಲಾಗಿದೆ ಒಂದು "ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳು" ಹಾಗೂ ಎರಡನೇಯದಾಗಿ ಸಂರಕ್ಷಣೆ ಮತ್ತು ಪಾಲನೆ–ಪೋಷಣೆಯ ಅಗತ್ಯವುಳ್ಳ ಮಗು ಎಂಬರ್ಥದಲ್ಲಿ ವಿವರಿಸಲಾಗಿದೆ.

ಬಾಲ ನ್ಯಾಯ ಕಾಯ್ದೆ 2015 ಪ್ರಕಾರ 'ಮಗು' ಎಂದರೆ 18 ವರ್ಷಗಳು ಪೂರೈಸದಿರುವ/ ಪೂರ್ಣಗೊಂಡಿರದ ಒಬ್ಬ ವ್ಯಕ್ತಿ ಎಂದರ್ಥ.

"ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳು" (child in conflict with law) ಎಂದರೆ ಅಪಾದನೆ ಅಥವಾ ಅಪರಾಧವನ್ನು ಮಾಡಿದ ಮಗು ಎಂದರ್ಥ. ಅಂದರೆ ಯಾವ ಮಗುವು ಅಪರಾಧ ಮಾಡಿದೆ ಎಂದು ದೂರಲಾದ ಅಥವಾ ಅಪರಾಧ ಮಾಡಿರುವುದು ಕಂಡು ಬಂದಿದ್ದು, ಅಪರಾಧ ಮಾಡಿದ ದಿನಾಂಕದಂದು 18 ವರ್ಷ ವಯಸ್ಸನ್ನು ಮೀರದ ಮಗು ಎಂದು ವಿವರಿಸಲಾಗಿದೆ.

**ಸಂರಕ್ಷಣೆ ಮತ್ತು ಪಾಲನೆ–ಪೋಷಣೆಯ ಅಗತ್ಯವುಳ್ಳ ಮಗು (child in need of Care and protection) ಎಂದರೆ –**

- ಯಾವುದೇ ನಿವಾಸ ಅಥವಾ ನೆಮ್ಮದಿಯ ನೆಲೆಯಿಲ್ಲದ ಮತ್ತು ಮೇಲ್ನೋಟಕ್ಕೆ ಜೀವನ ನಿರ್ವಹಣೆಗೆ ಯಾವುದೇ ಮಾರ್ಗವಿಲ್ಲದ
- ಜಾರಿಯಲ್ಲಿರುವ ಯಾವುದೇ ಕಾರ್ಮಿಕ ಕಾಯಿದೆಗಳನ್ನು ಉಲ್ಲಂಘಿಸಿ ಕೆಲಸ ನಿರ್ವಹಿಸುತ್ತಿರುವ ಅಥವಾ ಭಿಕ್ಷೆ ಬೇಡುತ್ತಿರುವ ಅಥವಾ ಬೀದಿಯಲ್ಲಿ ವಾಸಿಸುತ್ತಿರುವ
- ಯಾವುದೇ ವ್ಯಕ್ತಿಯೊಂದಿಗೆ ವಾಸಿಸುತ್ತಿರುವ(ಅಂತಹ ವ್ಯಕ್ತಿ ಮಗುವಿನ ಪೋಷಕನಿರಬಹುದು ಅಥವಾ ಅಲ್ಲದಿರಬಹುದು) ಮತ್ತು ಅಂತಹ ವ್ಯಕ್ತಿಯು ಮಗು ಅಥವಾ ಮಕ್ಕಳನ್ನು ಹಿಂಸೆ, ಶೋಷಣೆ, ಕೊಲೆ ಮಾಡುವ ಸಂಭವವಿರುವ ಹೀಗೆ ವಿಭಿನ್ನ ಅರ್ಥದಲ್ಲಿ ವಿವರಿಸಲಾಗಿದೆ.

**ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳ ವರ್ಗೀಕರಣ**

***ಜೆ ಜೆ* ಕಾಯೆ 2015**ರಡಿಯಲ್ಲಿ ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳು ಮಾಡುವ ವಿವಿಧ ರೀತಿಯ ಅಪರಾಧಗಳನ್ನು ಈ ಕೆಳಕಂಡಂತೆ ವರ್ಗಿಕರಿಸಿ ವ್ಯಾಖ್ಯಾನಿಸಲಾಗಿದೆ.

**ಸಣ್ಣ ಅಪರಾಧಗಳು**: ಸಣ್ಣ ಅಪರಾಧಗಳಲ್ಲಿ ಭಾರತೀಯ ದಂಡ ಸಂಹಿತೆ ಅಥವಾ ಯಾವುದೇ ಕಾನೂನಿನಡಿಯಲ್ಲಿ ಗರಿಷ್ಟ ಶಿಕ್ಷೆ ಮೂರು ವರ್ಷಗಳವರೆಗೆ ಜೈಲು ಶಿಕ್ಷೆಯಾಗುವ ಅಪರಾಧಗಳು ಸೇರಿವೆ.

**ಗಂಭೀರ ಅಪರಾಧಗಳು**: ಗಂಭೀರ ಅಪರಾಧಗಳಲ್ಲಿ ಭಾರತೀಯ ದಂಡ ಸಂಹಿತೆ ಅಥವಾ ಯಾವುದೇ ಕಾನೂನು ನಡಿಯಲ್ಲಿ ಬರುವ 3 ರಿಂದ 7 ವರ್ಷಗಳವರೆಗೆ ಜೈಲು ಶಿಕ್ಷೆಯಾಗುವ ಅಪರಾಧಗಳನ್ನು ಒಳಗೊಂಡಿದೆ.

**ಘೋರ ಅಪರಾಧಗಳು**: ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳು ಮಾಡುವ ಘೋರ ಅಪರಾಧಗಳಲ್ಲಿ ಭಾರತೀಯ ದಂಡ ಸಂಹಿತೆ ಅಥವಾ ಯಾವುದೇ ಕಾನೂನಿನನಡಿಯಲ್ಲಿ ಕನಿಷ್ಠ ಶಿಕ್ಷೆ 7 ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ಅವಧಿಗೆ ಜೈಲು ಶಿಕ್ಷೆ ವಿಧಿಸುತ್ತದೆ.

**ಸಾಹಿತ್ಯ ಸಮೀಕ್ಷೆ / ಸಾಹಿತ್ಯಾವಲೋಕನ**

**ಹೊವಾರ್ಡ್ ಬೆಕರ್ (1966/226–38)**ರಲ್ಲಿ ಮಕ್ಕಳ ಅಪರಾಧದ ಅಧ್ಯಯನದಲ್ಲಿ ನಾಲ್ಕು ವಿಭಿನ್ನ ಬಗೆಯ ನಡವಳಿಕೆಗಳನ್ನು ಉಲ್ಲೇಖಿಸಿದ್ದಾರೆ. ವೈಯಕ್ತಿಕ ವಿಚಲನ ನಡವಳಿಕೆ, ಗುಂಪು ಬೆಂಬಲಿತ ವಿಚಲನ ನಡವಳಿಕೆ, ಸಂಘಟಿತ ವಿಚಲನ ನಡವಳಿಕೆ, ಸಾಂದರ್ಬಿಕ ವಿಚಲನ ನಡವಳಿಕೆ ಈ ನಡವಳಿಕೆಗಳು ವಿವಿಧ ರೀತಿಯ ನಡವಳಿಕೆಯ ಸ್ವರೂಪವನ್ನು ಪ್ರದರ್ಶಿಸುತ್ತದೆ. ಪ್ರತಿಯೊಂದು ಮಾದರಿಯು ತನ್ನದೇ ಆದ ಸಾಮಾಜಿಕ ಸನ್ನಿವೇಶವನ್ನು ಹೊಂದಿದೆ.

**ಬೇಕರ್ (1968) "ಅಪರಾಧ ಮತ್ತು ಶಿಕ್ಷೆ: ಆರ್ಥಿಕ ದೃಷ್ಟಿಕೋನ"** ರವರು ತಮ್ಮ ಅಧ್ಯಯನದಲ್ಲಿ ಕಾನೂನು ಮತ್ತು ಅಪರಾಧ ಚಟುವಟಿಕೆ ಪ್ರೋತ್ಸಾಹದಾಯಕವಾಗಿ ಬಾಲಾಪರಾಧಿಗಳ ಅಪರಾಧವು ತರ್ಕಬದ್ಧ ಪ್ರತಿಕ್ರಿಯೆಯಾಗಿರಬಹುದು. ಅವರ ಪ್ರಕಾರ ಯುವಕರು ಅಪರಾಧ ವರ್ತನೆಯಲ್ಲಿ ತೊಡಗಿಕೊಂಡಿರುವುದು ಅದರಿಂದ ಸಿಗುವ ಸಂಭಾವ್ಯ ಲಾಭಗಳು ಸಾಕಷ್ಟು ದೊಡ್ಡದಾಗಿದ್ದು ಗಣನೀಯ ಶಿಕ್ಷೆಯ ಸಂಭವನೀಯತೆ ಅತ್ಯಂತ ಕಡಿಮೆ ಇರುವುದರಿಂದ ಎಂದು ಅಂದಾಜಿಸಿದ್ದಾರೆ.

**ರಕ್ಲಸ್ ಡಬ್ಲ್ಯು. ಸಿ. "ಅಪರಾಧ ಸಮಸ್ಯೆ" (1971)** ಗ್ರಂಥದಲ್ಲಿ ನೆರೆಹೊರೆಯವರ ಸಂಪರ್ಕ, ಮೂಲಭೂತ ಅವಶ್ಯಕತೆಗಳ ಕೊರತೆಯಿಂದಾಗಿ ಹೇಗೆ ಮಕ್ಕಳು ಅಪರಾಧಿ ಕೃತ್ಯದಲ್ಲಿ ತೊಡಗುತ್ತಾರೆ ಎಂದು ವಿಶ್ಲೇಷಿಸುವ ಪ್ರಯತ್ನ ಮಾಡಿದ್ದಾರೆ. ಮಕ್ಕಳು ತಮ್ಮ ಆಸೆ ಆಕಾಂಕ್ಷೆಗಳನ್ನು ಮೊಟಕುಗೊಳಿಸಿಕೊಂಡು ಅತೃಪ್ತರಾಗುತ್ತಾರೆ. ಈ ಅತೃಪ್ತ ಭಾವನೆ ಅಥವಾ ಬಯಕೆಗಳನ್ನು ಈಡೇರಿಸಿಕೊಳ್ಳಲು ಕಾನೂನು ಬಾಹಿರ ಮಾರ್ಗಗಳನ್ನು ಅನುಸರಿಸುತ್ತಾರೆ. ನೆರೆಹೊರೆಯವರು ಅಪರಾಧಿಗಳಾಗಿದ್ದರೆ ಅಂತವರ ಸಂಪರ್ಕ ಬೆಳಸಿ ವಾಮಮಾರ್ಗದ ಮೂಲಕ ತಮ್ಮ ಬಯಕೆಗಳನ್ನು ಈಡೇರಿಸಿಕೊಳ್ಳುತ್ತಾರೆ. ಜೂಜಾಟ, ಅಶ್ಲೀಲ ಚಲನಚಿತ್ರ ವೀಕ್ಷಣೆ, ಧೂಮಪಾನ ಮಧ್ಯಾಪಾನ, ವೇಶ್ಯಾಗೃಹಗಳ ಸಹವಾಸ ಹೀಗೆ ಕೆಟ್ಟ ಅವ್ಯಾಸಗಳಿಗೆ ಮಾರುಹೋಗಿ ಅಪರಾಧಿಗಳಾಗುತ್ತಾರೆ ಎಂದಿದ್ದಾರೆ.

**ದಶರತ್ ರಾಮಯ್ಯ (1976)** ಪ್ರಕಾರ ಮಕ್ಕಳ ವ್ಯಕ್ತಿತ್ವದ ಬೆಳವಣಿಗೆಯಲ್ಲಿ ಕುಟುಂಬದ ಮಾರ್ಗದರ್ಶನ ಪ್ರಭಾವ ಬೀರುತ್ತದೆ. ಮಗುವಿನ ವ್ಯಕ್ತಿತ್ವದ ನಿರ್ಮಾಣದಲ್ಲಿ ಶೈಶಾವಸ್ಥೆಯಿಂದ ಬಾಲ್ಯಾವಸ್ಥೆಯವರೆಗು ಸಾಮಾಜಿಕ ಸಾಂಸ್ಕೃತಿಕ ಮತ್ತು ಭೌತಿಕ ಪರಿಸರಗಳು ಪ್ರಭಾವ ಬೀರುತ್ತವೆ. ತನ್ನ ಕುಟುಂಬದ ಸದಸ್ಯರು, ಸಂಬಂದಿಗಳು, ಗೆಳೆಯರ ಬಳಗ ಕೆಲವು ಹೊಸ ಸನ್ನಿವೇಶಕ್ಕೆ ಅನುಗುಣವಾಗಿ ರೂಪುಗೊಳ್ಳುವ ಅಗತ್ಯವಿರುತ್ತದೆ. ಲೇಖಕರ ಅಭಿಪ್ರಾಯದಂತೆ ಮಗು ಇತರ ಸದಸ್ಯರೊಂದಿಗೆ ಹೊಂದಿಕ್ಕೊಂಡು ಬೆಳೆಯುವ ಹೊಸ ಸಾಮರ್ಥ್ಯ ಮತ್ತು ಗ್ರಹಿಕೆಗಳನ್ನು ಬೆಳೆಸಿಕ್ಕೊಳ್ಳಬೇಕಾಗುತ್ತದೆ. ಪೊಷಕರಾದವರು ಮಕ್ಕಳೊಂದಿಗೆ ವ್ಯವಹರಿಸುವಾಗ ಅತಿಯಾದ ರಕ್ಷಣೆ ಅಥವಾ ತಿರಸ್ಕಾರ ತಪ್ಪಿಸಿ ಸಮತೋಲಿತ ವರ್ತನೆಯನ್ನು ಅಭಿವ್ಯಕ್ತಗೊಳಿಸಬೇಕೆಂದು ತಿಳಿಸಿದ್ದಾರೆ.

**ಕೆ.. ಕುಸುಮ್, 'ಬಾಲಾಪರಾಧ– ಸಾಮಾಜಿಕ–ಕಾನೂನು ಅಧ್ಯಯನ' (1979) ಕೆಎಲ್ಎಮ್ ಬುಕ್ ಹೌಸ್, ನವದೆಹಲಿಯಿಂದ ಪ್ರಕಟಿಸಲಾಗಿದೆ.** ಕಾನೂನಾತ್ಮಕ ಪರಿಭಾಷೆಯಲ್ಲಿ "ಅಪರಾಧ" ಎಂಬುದು ಸಾಮಾಜಿಕವಾಗಿ ಒಪ್ಪದ ನಡವಳಿಕೆಗೆ ಸಂಬಂಧಿಸಿದ ಹಾಗೂ ಸಮಯ, ಸ್ಥಳ ಮತ್ತು ಬದಲಾಗುವ ಪರಿಕಲ್ಪನೆಯ ಪ್ರತಿಬಿಂಬವಾಗಿದೆ. ಜನರ ವರ್ತನೆಗಳು, ನಡವಳಿಕೆಯು ನಿಷ್ಠುರತೆ, ಅಸಮರ್ಪಕತೆ, ಅವಿಧೇಯತೆ, ಸುಳ್ಳು ಹೇಳುವುದು, ಮನೆಯಿಂದ ಓಡಿಹೋಗುವುದು, ಚಲನಚಿತ್ರಗಳ ವೀಕ್ಷಣೆ, ಕೆಟ್ಟ ಖ್ಯಾತಿಯ ಸ್ಥಳಗಳಿಗೆ ಭೇಟಿ ನೀಡುವುದು ಮತ್ತು ತಡರಾತ್ರಿ ಮನೆಗೆ ಬರುವುದು ಮುಂತಾದ ಕೃತ್ಯಗಳನ್ನು ಒಳಗೊಂಡಿರಬಹುದು. ಇದು ಮನೆಯಿಲ್ಲದ, ನಿರ್ಗತಿಕ ಮತ್ತು ನಿರ್ಲಕ್ಷಿಸಲ್ಪಟ್ಟ ಮಗುವನ್ನು ಸಹ ಒಳಗೊಂಡಿರುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಸಮಾಜಶಾಸ್ತ್ರದ ದೃಷ್ಟಿಯಲ್ಲಿ ಅಪರಾಧಿಯು ಮಗುವಾಗಿದ್ದು, ಅವರ ಚಟುವಟಿಕೆಗಳು ಪೋಷಕರು ಮತ್ತು ಶಿಕ್ಷಕರು ಮತ್ತು ಅವರ ಆರೈಕೆ ಮತ್ತು ಶಿಕ್ಷಣಕ್ಕೆ ಜವಬ್ದಾರರಾಗಿರುವ ಇತರರಿಗೆ ಕಾಳಜಿ ಮತ್ತು ಎಚ್ಚರಿಕೆಯನ್ನು ಉಂಟುಮಾಡುತ್ತವೆ. ಅಪರಾಧದ ವ್ಯಾಖ್ಯಾನವು ನಡವಳಿಕೆಯನ್ನು ಒಳಗೊಂಡಿರುತ್ತದೆ, ಇದು ಮಕ್ಕಳಿಂದ ಮಾಡಲ್ಪಟ್ಟಾಗ ಮಾತ್ರ ಕಾನೂನನ್ನು ಉಲ್ಲಂಘಿಸುತ್ತದೆ ಉದಾ. ನಿರಾಕರಣೆ, ನಿಯಂತ್ರಿಸಲಾಗದ ನಡವಳಿಕೆ ಮತ್ತು ಓಡಿಹೋಗುವುದು.

**ಮೊಫಿಟ್ ಟಿ ಇ ರವರು (1993) ''ಅಡೋಲೆಸೆನ್ಸ್ ಲಿಮಿಟೆಡ್ ಅಂಡ್ ಲೈಫ್ ಕೋರ್ಸ್ ಪರ್ಸಿಸ್ಟೆಂಟ್ ಆಚಿಟಿ ಸೋಷಿಯಲ್ ಬಿಯೆವಿಯರ್''** ತಮ್ಮ ಅಧ್ಯಯನದಲ್ಲಿ ಚಿಕ್ಕವಯಸ್ಸಿನವರಲ್ಲಿ ಹಾಗೂ ಹದಿಹರೆಯದ ವಯಸ್ಸಿನಲ್ಲಿ ಅಪರಾಧಗಳನ್ನು ಮಾಡುವವರ ಹಾಗೂ ಜೀವನದುದ್ದಕ್ಕೂ ಅಪರಾಧಗಳನ್ನು

ಮುಂದುವರಿಸುವವರ ನಡುವಿನ ವ್ಯತ್ಯಾಸವನ್ನು ಅಧ್ಯಯನ ಮಾಡಿದ್ದಾರೆ. ಮಕ್ಕಳಲ್ಲಿ ಅಪರಾಧಗಳು ಸಾಮಾಜಿಕ ವೈಯಕ್ತಿಕ ವಿಘಟನೆಯ ಫಲವಾಗಿ ಸೃಷ್ಟಿಯಾಗುತ್ತವೆ. ಅನುಭವದ ಅನುಕ್ರಮದಲ್ಲಿ ಅಸ್ತವ್ಯಸ್ತತೆ ಮತ್ತು ನಡವಳಿಕೆಯನ್ನು ರೂಪಿಸುವಲ್ಲಿನ ಸಮಸ್ಯೆಗಳು ಅಪರಾಧಕ್ಕೆ ದಾರಿಮಾಡಿಕೊಡುತ್ತವೆ. ಮೂಲತಃ ಸಾಮಾಜಿಕ–ವೈಯಕ್ತಿಕ ನಿಯಂತ್ರಣಗಳ ವೈಫಲ್ಯಗಳ ಫಲವಾಗಿ ಹಾಗೂ ಹಲವಾರು ಅಸ್ಥಿರಗಳನ್ನು ಒಳಗೊಂಡ ಸಾಮಾಜಿಕ ಪ್ರಕ್ರಿಯೆಗಳ ಉತ್ಪನ್ನವಾಗಿ ಮಕ್ಕಳಲ್ಲಿ ಅಪರಾಧಗಳ ಸೃಷ್ಟಿಯಾಗುತ್ತದೆ.

**ರಾಮ್ ಆಹುಜಾ ರವರ (1995)** ಪ್ರಕಾರ ಮಕ್ಕಳ ಬುದ್ದಿ ಶಕ್ತಿಯು ಅನುವಂಶಿಯತೆ ಮತ್ತು ಪರಿಸರದಿಂದ ಪ್ರಭಾವಿತವಾಗಿರುತ್ತದೆ. ಸಮಾಜದ ನಿಯಮಗಳನ್ನು ಉಲ್ಲಂಘಿಸುವ ಮಕ್ಕಳ ವರ್ತನೆಯನ್ನು ಬಾಲಾಪರಾಧ ಎಂದು ಗುರುತಿಸಲಾಗುತ್ತದೆ. ಕಡಿಮೆ ಬುದ್ಧಿಶಕ್ತಿ ಹೊಂದಿರುವ ಮಗು ಪೋಷಕರಿಂದ ಆತಿಯಾದ ರಕ್ಷಣೆ ಅಥವಾ ತಿರಸ್ಕಾರದ ಭಾವನೆಯನ್ನು ಹೊಂದಿರುತ್ತಾರೆ. ಅಂತಹ ಮಕ್ಕಳು ವಿನಾಶಕಾರಿ ವರ್ತನೆಯನ್ನು ಹಾಗೂ ಅಪವರ್ತನೆಯ ಮನೋಭಾವನೆಯನ್ನು ಅಳವಡಿಸಿಕೊಳ್ಳುತ್ತಾರೆ ಎಂದಿದ್ದಾರೆ.

**ಪ್ರಸಾದ್, ಬಿ.ಡಿ.. ಮತ್ತು ಹರ್ನಾಶ್, ಎಸ್., (1995) "ಜುವೆನೈಲ್ ಹೋಮ್ ಇನ್ಮೇಟ್ಸ್: ಬ್ಯಾಕ್ ಗ್ರೌಂಡ್ ಕ್ಯಾರಕ್ಟರಿಸ್ಟಿಕ್ಸ್",** ಎಂಬ ಅಧ್ಯಯನದಲ್ಲಿ ಆಧ್ರದಲ್ಲಿ ಬಾಲಾಪರಾಧಿ ಮನೆಯ 82 ಕೈದಿಗಳ ಸಾಮಾಜಿಕ ಜನಸಂಖ್ಯಾ ಗುಣಲಕ್ಷಣಗಳನ್ನು ಅಧ್ಯಯನ ಮಾಡಿದರು. ಮಾದರಿ ಜನಸಂಖ್ಯೆಯಲ್ಲಿ ನಗರದ ಮಕ್ಕಳು (84 ಪ್ರತಿಶತ), ಅನಕ್ಷರಸ್ಥರು (40 ಪ್ರತಿಶತ) ಇರುವುದು ಕಂಡುಬರುತ್ತದೆ. ಇವರ ಸರಾಸರಿ ವಯಸ್ಸು ಸುಮಾರು 13 ವರ್ಷಗಳು. ಅವರಲ್ಲಿ ಗಣನೀಯ ಸಂಖ್ಯೆಯವರು ಅವರ ಕುಟುಂಬಗಳಿಂದ ಮೂರು ವರ್ಷಗಳು ಮತ್ತು ಅದಕ್ಕಿಂತ ಹೆಚ್ಚಿನ ಅವಧಿಯಿಂದ ದೂರವಾಗಿದ್ದರು, ಸಾಮಾನ್ಯ ಚಟುವಟಿಕೆಗಳಲಗಲ್ಲಿ ಪೀರ್ ಗುಂಪಿನೊಂದಿಗೆ ಭಾಗವಹಿಸುವಿಕೆ ಪ್ರತಿಶತ: ಸಿನಿಮಾಗೆ ಹೋಗುವವರು (97), ಕಾಲಹರಣ ಮಾಡುವ ಸೋಮಾರಿಗಳು (93 ಪ್ರತಿಶತ), ಒಟ್ಟಿಗೆ ಆಟವಾಡುವುದು (87 ಪ್ರತಿಶತ). ಅಧ್ಯಯನವು ವರದಿ ಮಾಡಿದೆ. ಹೆಚ್ಚಿನ ಅಪರಾಧಿಗಳ ಪ್ರಕಾರ ಮನೆಗಳಿಂದ ಹೊರಹೋಗಲು ಪ್ರಮುಖ ಕಾರಣ ಕುಟುಂಬಗಳಲ್ಲಿನ ದೈಹಿಕ ಮತ್ತು ಮೌಖಿಕ ನಿಂದನೆಯನ್ನು ಪ್ರಮುಖ ಅಂಶವೆಂದು ವರದಿ ಮಾಡಿದ್ದಾರೆ. ಬಹುತೇಕ ಅಪರಾಧಿಗಳ ಪೋಷಕರಲ್ಲಿ ಹೆಚ್ಚಿನವರು ಅಸಂಘಟಿತ ವಲಯದಲ್ಲಿ ಉದ್ಯೋಗದಲ್ಲಿದ್ದು ಕಡಿಮೆ ಆದಾಯವನ್ನು ಹೊಂದಿದ್ದರು.

**ವೆದರ್ಬರ್ನ್ ಡಿ. ಮತ್ತು ಲಿಂಡ್ ಬಿ. (1997) "ಸಾಮಾಜಿಕ ಮತ್ತು ಆರ್ಥಿಕ ಒತ್ತಡ, ಮಕ್ಕಳ ನಿರ್ಲ್ಯಕ್ಷ್ಯ ಮತ್ತು ಜುವೆನೈಲ್ ಅಪರಾಧ"ರವರು** ತಮ್ಮ ಅಧ್ಯಯನದಲ್ಲಿ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಮಕ್ಕಳಲ್ಲಿ ಅಪರಾಧಗಳು ಹೆಚ್ಚಾಗಲು ಕಾರಣಗಳೇನು ಎಂಬುದನ್ನು ಅವಲೋಕಿಸಿದ್ದಾರೆ. ಅವರ ಪ್ರಕಾರ ಸಾಮಾಜಿಕ–ಆರ್ಥಿಕ ಕಾರಣಗಳು ಮೂಲಭೂತವಾಗಿ ಮಕ್ಕಳಲ್ಲಿ ಅಪರಾಧ ಪ್ರಕರಣಗಳು ಹೆಚ್ಚಾಗಲು ಕಾರಣವಾಗಿದೆ ಎಂದಿದ್ದಾರೆ. ಮಕ್ಕಳ ನಿರ್ಲಕ್ಷ್ಯ ಮತ್ತು ನಿಂದನೆಯ ದರಗಳ ಮೇಲೆ ಸಾಮಾಜಿಕ ಮತ್ತು ಆರ್ಥಿಕ ಒತ್ತಡಗಳ ಪರಿಣಾಮವಾಗಿ ಮಕ್ಕಳಲ್ಲಿ ಅಪರಾಧ ಪ್ರಕರಣಗಳು ಹೆಚ್ಚಾಗಿವೆ. ಬಡತನ, ಏಕ ಪೋಷಕ ಕುಟುಂಬಗಳು ಮತ್ತು ಕಿಕ್ಕಿರಿದ ವಾಸಸ್ಥಳಗಳು ನಿರ್ಲಕ್ಷ್ಯಕ್ಕೆ ಕಾರಣಗಳಾಗಿವೆ.

**ಕಾರಣೀಯ ಅಂಶಗಳು–ಸಾಮಾಜಿಕ–ಆರ್ಥಿಕ ಪರಿಸ್ಥಿತಿಗಳು**

ಕೆಲವು ಮಕ್ಕಳು ಕಾನೂನಿಗೆ ವಿರುದ್ಧವಾಗಿ ಹೋಗಲು ಸಾಮಾನ್ಯ ಕಾರಣವೆಂದರೆ ಶಿಕ್ಷಣದ ಕೊರತೆ ಅಥವಾ ಅವರ ಪಾಲನೆಯಲ್ಲಿನ ದೋಷಗಳು ಅನಾರೋಗ್ಯಕರ ಸಾಮಾಜಿಕ–ಆರ್ಥಿಕ ಹಾಗೂ ಸಾಂಸ್ಕೃತಿಕ ಪರಿಸರದ ಕಾರಣದಿಂದಾಗಿ ಮಗು ದೈಹಿಕವಾಗಿ ಮತ್ತು ಮಾನಸಿಕವಾಗಿ ಅನರ್ಹರಾಗಲು ಮತ್ತು ಬೇಜವಾಬ್ದಾರಿ ನಾಗರಿಕರಾಗಲು ಕಾರಣವಾಗುತ್ತದೆ.

ಮಕ್ಕಳ ಈ ರೀತಿಯ ವಿಕೃತ ವರ್ತನೆಗೆ ಕಾರಣವಾಗುವ ಮುಖ್ಯ ಅಂಶಗಳೆಂದರೆ ನಿರ್ಬಂಧಿತ ಕೌಟುಂಬಿಕ ವಿಧ, ಬಡತನ, ಒಡೆದ ಮನೆಗಳು, ಗೆಳೆಯರ ಪ್ರಭಾವ, ಅಸಹಜ ಕೌಟುಂಬಿಕ ವಾತಾವರಣ, ಪೋಷಕರ ಮೇಲ್ವಿಚಾರಣೆಯಿಲ್ಲದಿರುವುದು, ಕಡಿಮೆ ಮಟ್ಟದ ಶಿಕ್ಷಣ, ಕುಡಿತದ ಅಭ್ಯಾಸಗಳು, ಧೂಮಪಾನದ ಅಭ್ಯಾಸಗಳು ಮತ್ತು ಅನೈತಿಕತೆ ಇತ್ಯಾದಿ. ಕಾನೂನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳ ಜವಾಬ್ದಾರಿಗಾಗಿ ಇವು ಮುಖ್ಯ ಅಪಾಯಕಾರಿ ಅಂಶಗಳಾಗಿವೆ. ಹಿಂದುಳಿದ ನೆರೆಹೊರೆಗಳಲ್ಲಿ ಮಕ್ಕಳ ಅಪರಾಧವು ಹೆಚ್ಚು ಸಾಮಾನ್ಯವಾಗಿದೆ. ಎಲ್ಲಾ ನೆರೆಹೊರೆಗಳು ಅಪರಾಧ ಚಟುವಟಿಕೆಗಳಿಂದ ಹೊರತಾಗಿಲ್ಲವಾದರೂ, ಮಕ್ಕಳು ಏಳಿಗೆಗಾಗಿ ಅಪರಾಧಗಳನ್ನು ಮಾಡಬೇಕು ಎಂದು ಭಾವಿಸುವ ಪ್ರದೇಶಗಳಲ್ಲಿ ಅವು ಹೆಚ್ಚು ಸಂಭವಿಸುತ್ತವೆ ಎಂದು ನಂಬಲಾಗಿದೆ.

**ಸಾಮಾಜಿಕ ಅಂಶಗಳು**

ಮುರಿದ ಮನೆಗಳು, ಪೋಷಕರು ಅಥವಾ ಒಡಹುಟ್ಟಿದವರ ಮಾನಸಿಕ ಮತ್ತು ದೈಹಿಕ ಅಸಹಜತೆಗಳು, ಅನೈತಿಕ ಮತ್ತು ಅಪರಾಧಿ ಪೋಷಕರು, ಸಾಕು ಪೋಷಕರು, ಮಲ–ತಂದೆ–ತಾಯಿ ಅಥವಾ ಪೋಷಕರಿಂದ ಕೆಟ್ಟ ಚಿಕಿತ್ಸೆ, ಕಾನೂನು ಬಾಹಿರತೆಯ ಕಳಂಕ, ಪೋಷಕರ ಆರೈಕೆ ಮತ್ತು ಪ್ರೀತಿಯ ಕೊರತೆ, ಪೋಷಕರ ನಡುವೆ ವಿಶ್ವಾಸ ಮತ್ತು ನಿಷ್ಕಪಟತೆಯ ಕೊರತೆ ಮತ್ತು ಮಕ್ಕಳು, ಕೊರತೆ ಮತ್ತು ತಪ್ಪು ನಿರ್ದೇಶನದ ಶಿಸ್ತು, ಒಡಹುಟ್ಟಿದವರೊಂದಿಗಿನ ಅಸಂತೋಷದ ಸಂಬಂಧ, ಕೆಟ್ಟ ಉದಾಹರಣೆ, ವಿದೇಶಿ ಜನನ ಅಥವಾ ಪೋಷಕತ್ವ..

**ಕೌಟುಂಬಿಕ ರಚನೆ**

ಕಳಪೆ ಪೋಷಕರ ಕೌಶಲ್ಯಗಳು, ಕುಟುಂಬದ ಗಾತ್ರ, ಮನೆಯ ಅಪಶ್ರುತಿ, ಮಕ್ಕಳ ಕಿರುಕುಳ ಮತ್ತು ಸಮಾಜವಿರೋಧಿ ಪೋಷಕರು ಮುಂತಾದ ಕುಟುಂಬದ ಗುಣಲಕ್ಷಣಗಳು ಮಕ್ಕಳ ಅಪರಾಧಕ್ಕೆ ಸಂಬಂಧಿಸಿದ ಅಪಾಯಕಾರಿ ಅಂಶಗಳಾಗಿವೆ. ಕೌಟುಂಬಿಕ ಅಪಾಯದ ಅಂಶಗಳ ಸ್ಥಿರವಾದ ಮಾದರಿಯು ಯುವ ಜನರಲ್ಲಿ ಅಪರಾಧ ವರ್ತನೆಯ ಬೆಳವಣಿಗೆಯೊಂದಿಗೆ ಸಂಬಂಧಿಸಿದೆ. ಈ ಕುಟುಂಬದ ಅಪಾಯಕಾರಿ ಅಂಶಗಳು ಸರಿಯಾದ ಪೋಷಕರ ಮೇಲ್ವಿಚಾರಣೆಯ ಕೊರತೆ, ನಡೆಯುತ್ತಿರುವ ಪೋಷಕರ ಸಂಘರ್ಷ, ನಿರ್ಲಕ್ಷ್ಯ ಮತ್ತು ನಿಂದನೆ (ಭಾವನಾತ್ಮಕ, ಮಾನಸಿಕ ಅಥವಾ ದೈಹಿಕ). ಕಾನೂನು ಮತ್ತು ಸಾಮಾಜಿಕ ನಿಯಮಗಳ ಬಗ್ಗೆ ಗೌರವದ ಕೊರತೆಯನ್ನು ಪ್ರದರ್ಶಿಸುವ ಪೋಷಕರು ಅದೇ ರೀತಿ ಯೋಚಿಸುವ ಮಕ್ಕಳನ್ನು ಹೊಂದಿರುತ್ತಾರೆ. ಅಂತಿಮವಾಗಿ, ತಮ್ಮ ಪೋಷಕರು ಮತ್ತು ಕುಟುಂಬಗಳಿಗೆ ದುರ್ಬಲವಾದ ಬಾಂಧವ್ಯವನ್ನು ಪ್ರದರ್ಶಿಸುವ ಮಕ್ಕಳು ನಿಖರವಾಗಿ ಅದೇ ಮಕ್ಕಳು, ತಪ್ಪಿತಸ್ಥ ನಡವಳಿಕೆ ಸೇರಿದಂತೆ ಅನುಚಿತ ಚಟುವಟಿಕೆಗಳಲ್ಲಿ ತೊಡಗುತ್ತಾರೆ.

**ಕಳಪೆ ಶಾಲಾ ಹಾಜರಾತಿ ಮತ್ತು ಕಳಪೆ ಶೈಕ್ಷಣಿಕ ಗುಣಮಟ್ಟ**

ಕಳಪೆ ಶಾಲಾ ಹಾಜರಾತಿಯು ಅಪರಾಧಕ್ಕೆ ಕೊಡುಗೆ ನೀಡುವ ಪ್ರಮುಖ ಅಂಶಗಳಲ್ಲಿ ಒಂದಾಗಿದೆ. ಶಾಲೆಯು ಕಲಿಯಲು ಮತ್ತು ಬೆಳೆಯುವ ಸ್ಥಳ ಮಾತ್ರವಲ್ಲ; ಇದು ಪ್ರತಿ ದಿನವೂ ಸಾಧಿಸುವ ಗುರಿಯೊಂದಿಗೆ ಮಕ್ಕಳಿಗೆ ಒದಗಿಸುವ ರಚನಾತ್ಮಕ ದಿನಚರಿಯಾಗಿದೆ. ಪ್ರತಿದಿನ ಎದ್ದೇಳುವುದು, ತಯಾರಾಗುವುದು, ಶಾಲೆಗೆ ಹಾಜರಾಗುವುದು, ಕೆಲಸವನ್ನು ಪೂರ್ಣಗೊಳಿಸುವುದು ಮತ್ತು ಮನೆಗೆ ಹಿಂದಿರುಗುವ ದಿನಚರಿಯು ಭವಿಷ್ಯದಲ್ಲಿ ಉತ್ತಮ ಆಯ್ಕೆಗಳಿಗೆ ಆಧಾರವಾಗಿರುವ ದಿನಚರಿಯನ್ನು ಸ್ಥಾಪಿಸುತ್ತದೆ. ಶಾಲೆಗೆ ಹಾಜರಾಗುವ ದಿನಚರಿಯನ್ನು ಒಪ್ಪಿಕೊಳ್ಳುವಲ್ಲಿ ವಿಫಲವಾದರೆ ಅವರು ಸಾಮಾಜಿಕ ಮಾನದಂಡಗಳನ್ನು ಅನುಸರಿಸಬೇಕಾಗಿಲ್ಲ ಮತ್ತು ಅವರು ಬಯಸಿದಂತೆ ಮಾಡಬಹುದು ಎಂಬ ಭಾವನೆಯನ್ನು ಮಕ್ಕಳಲ್ಲಿ ತುಂಬುತ್ತದೆ. ಮಗುವು ಹಾಜರಾಗುವ ಶಾಲೆಯ ಪ್ರಕಾರವೂ ಅವರ ಅಪರಾಧಕ್ಕೆ ಕಾರಣವಾಗಬಹುದು.

ಕಿಕ್ಕಿರಿದ ಮತ್ತು ಕಡಿಮೆ ಅನುದಾನದ ಶಾಲೆಗಳು ಶಿಸ್ತು ಮತ್ತು ಕ್ರಮವನ್ನು ಹೊಂದಿರುವುದಿಲ್ಲ.ಈ ಶಾಲೆಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಅವ್ಯವಸ್ಥೆಯು ಮಕ್ಕಳನ್ನು ಹೆಚ್ಚು ರಕ್ಷಣಾತ್ಮಕವಾಗಿ ವರ್ತಿಸುವಂತೆ ಮಾಡುತ್ತದೆ. ಏಕೆಂದರೆ ಅವರು ತಮ್ಮ ಸುತ್ತಮುತ್ತಲಿನ ಪ್ರದೇಶಗಳಿಂದ ಭಯಪಡುತ್ತಾರೆ. ಶಾಲಾ ಕೆಲಸ ಮತ್ತು ಶಾಲಾ ಆಧಾರಿತ ಚಟುವಟಿಕೆಗಳಲ್ಲಿ ಪೋಷಕರ ಒಳಗೊಳ್ಳುವಿಕೆ ಅಪರಾಧ ಚಟುವಟಿಕೆಗಳಿಗೆ ಬಹಳ ದೊಡ್ಡ ನಿರೋಧಕವಾಗಿದೆ ಎಂದು ಕಂಡುಬಂದಿದೆ. ವಯಸ್ಕನು ಮಗುವಿನ ಜೀವನದಲ್ಲಿ ಸಕ್ರಿಯವಾಗಿದ್ದಾಗ, ಆ ಮಗು ಶಾಲೆ ಮತ್ತು ಸಾಮಾಜಿಕ ಪರಿಸರದಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಲು ಹೆಚ್ಚು ಒಳಗಾಗುತ್ತದೆ.

**ಕೌಟುಂಬಿಕ ಹಿಂಸೆ**

ಅಪರಾಧಕ್ಕೆ ದೊಡ್ಡ ಕೊಡುಗೆ ನೀಡುವ ಅಂಶವೆಂದರೆ ಮನೆಯಲ್ಲಿ ಹಿಂಸೆ. ಮನೆಯಲ್ಲಿ ಅವರು ಅನುಭವಿಸುವ ಹಿಂಸೆಗಾಗಿ ಇತರರನ್ನು ಕೆಣಕುವುದು ತುಂಬಾ ಸಾಮಾನ್ಯವಾಗಿದೆ. ಹಿಂಸಾತ್ಮಕ ಕ್ರಿಯೆಗಳಿಗೆ ಒಳಗಾದ ಹದಿಹರೆಯದವರು ಅಥವಾ ಇತರರಿಗೆ ಸಾಕ್ಷಿಯಾಗುವವರು ತಮ್ಮ ಭಯ ಮತ್ತು ಹತಾಶೆಯನ್ನು ವ್ಯಕ್ತಪಡಿಸುವ ಸಾಧ್ಯತೆಯಿದೆ. ಅವರು ಸಾಮಾನ್ಯವಾಗಿ "ಡೋಂಟ್ ಕೇರ್" ಮನೋಭಾವವನ್ನು ಹೊಂದಿರುತ್ತಾರೆ ಮತ್ತು ಇದು ಹೆಚ್ಚು ಸುಲಭವಾಗಿ ತೊಂದರೆಗೆ ಸಿಲುಕಲು ಅನುವು ಮಾಡಿಕೊಡುತ್ತದೆ.

**ಸಾಮಾಜಿಕ ವಲಯಗಳಲ್ಲಿ ಹಿಂಸೆ**

ಮಗು ವಾಸಿಸುವ ನೆರೆಹೊರೆಯು ಹಿಂಸಾತ್ಮಕವಾಗಿದ್ದರೆ, ಮಕ್ಕಳು ಅಪರಾಧಕ್ಕೆ ಹೆಚ್ಚಾಗಿ ಒಳಗಾಗುವ ಪ್ರವೃತ್ತಿಯನ್ನು ಹೊಂದಿರುತ್ತಾರೆ. ಗ್ಯಾಂಗ್ ಸದಸ್ಯರು ಅಥವಾ ಹಿಂಸಾತ್ಮಕ ಜನರಿಂದ ತೊಂದರೆಯಿಂದ ದೂರವಿರಲು ಮಗುವು ತೊಂದರೆಗೆ ಸಿಲುಕುತ್ತದೆ.

**ಗೆಳೆಯರ ಬಳಗದ ಒತ್ತಡ**

ನೆರೆಹೊರೆಯ ಒತ್ತಡಗಳಂತೆಯೇ, ನೇರ ಪರಿಚಯಸ್ಥರಿಂದ ಪೀರ್ ಒತ್ತಡವು ಕೆಟ್ಟ ಸನ್ನಿವೇಶಗಳು ಪರಿಣಾಮ ಬೀರಬಹುದು. ಅವರ ಎಲ್ಲಾ ಸ್ನೇಹಿತರು ತಪ್ಪಿತಸ್ಥ ಕೃತ್ಯಗಳನ್ನು ಮಾಡುತ್ತಿದ್ದರೆ, ಅದೇ ರೀತಿ ಮಾಡಲು ಒತ್ತಡವನ್ನು ಅನುಭವಿಸಬಹುದು.

**ಮಾದಕದ್ರವ್ಯದ ದುರ್ಬಳಕೆ**

ಮನೆಯಲ್ಲಿ ಅಥವಾ ಮಗುವಿನಿಂದ ಮಾದಕ ದ್ರವ್ಯ ದುರುಪಯೋಗವು ಅಪರಾಧಕ್ಕೆ ಸಾಮಾನ್ಯ ಕಾರಣವಾಗಿದೆ. ಮಾದಕ ವ್ಯಸನಕ್ಕೆ ಒಳಗಾಗುವ ಮಕ್ಕಳು ಸಾಮಾನ್ಯವಾಗಿ ಅವರು ಅಭಿವೃದ್ಧಿ ಹೊಂದಲು ಅಗತ್ಯವಿರುವ ಅಗತ್ಯಗಳನ್ನು ಹೊಂದಿರುವುದಿಲ್ಲ ಮತ್ತು ಈ ಅಗತ್ಯಗಳನ್ನು ಇತರ ರೀತಿಯಲ್ಲಿ ಕಂಡುಕೊಳ್ಳಲು ಒತ್ತಾಯಿಸಲಾಗುತ್ತದೆ. ವಸ್ತುವಿನ ಮೇಲೆ ಅವಲಂಬಿತರಾದ ಇತರರು ತಮ್ಮ ಅಭ್ಯಾಸವನ್ನು ಉಳಿಸಿಕೊಳ್ಳಲು ಅಪರಾಧಗಳನ್ನು ಮಾಡಬೇಕಾಗಬಹುದು. ಮಕ್ಕಳ ಅಪರಾಧದ ಬಹುಪಾಲು ಪ್ರಕರಣಗಳಲ್ಲಿ ಮಾದಕದ್ರವ್ಯದ ದುರ್ಬಳಕೆ ಕಂಡುಬರುತ್ತದೆ, ಮಾದಕ ದ್ರವ್ಯ ಸೇವನೆ ಮತ್ತು ಅಪ್ರಾಪ್ತ ವಯಸ್ಕರಿಗೆ ಸಂಬಂಧಿಸಿದಂತೆ ಎರಡು ಪ್ರವೃತ್ತಿಗಳನ್ನು ಗುರುತಿಸಲಾಗಿದೆ. ಮೊದಲನೆಯದಾಗಿ, ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳು ಇಂದು 10 ವರ್ಷಗಳ ಹಿಂದೆ ಇದ್ದಕ್ಕಿಂತ ಹೆಚ್ಚು ಶಕ್ತಿಶಾಲಿ ಔಷಧಗಳನ್ನು ಬಳಸುತ್ತಿದ್ದಾರೆ. ಎರಡನೆಯದಾಗಿ, ಕೆಲವು ಮಕ್ಕಳು ಮಾದಕ ದ್ರವ್ಯಗಳನ್ನು ಬಳಸಲು ಪ್ರಾರಂಭಿಸುವ ವಯಸ್ಸು ಚಿಕ್ಕದಾಗಿದೆ. ಪ್ರಾಥಮಿಕ ಶಾಲೆಗಳಲ್ಲಿ ಮಕ್ಕಳು ಶಕ್ತಿಯುತವಾದ ಅಕ್ರಮ ಔಷಧಗಳನ್ನು ಬಳಸುತ್ತಿರುವುದು ಕಂಡುಬಂದಿದೆ. ಈ ಕಾನೂನುಬಾಹಿರ ಪದಾರ್ಥಗಳ ಬಳಕೆ ಅಥವಾ ಕಾನೂನುಬದ್ಧ ವಸ್ತುಗಳ ಬಳಕೆಯು ಯುವಜನರನ್ನು ಮಾದಕವಸ್ತುಗಳಿಗೆ ಹಣವನ್ನು ಪಡೆಯಲು ಅಪರಾಧಗಳನ್ನು ಮಾಡಲು ಪ್ರೇರೇಪಿಸುತ್ತದೆ. ಹೆಚ್ಚುವರಿಯಾಗಿ, ಡ್ರಗ್ಸ್ ಮತ್ತು ಆಲ್ಕೋಹಾಲ್ ಬಳಸುವಾಗ ಅಪ್ರಾಪ್ತ ವಯಸ್ಕರು ವಿನಾಶಕಾರಿ, ಹಾನಿಕಾರಕ ಮತ್ತು ಕಾನೂನುಬಾಹಿರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಸಾಧ್ಯತೆ ಹೆಚ್ಚು.

**ನೈತಿಕ ಮಾರ್ಗದರ್ಶನದ ಕೊರತೆ/ಮೌಲ್ಯಗಳ ಕುಸಿತ**

ಅಪರಾಧವನ್ನು ತಡೆಯುವಲ್ಲಿ ಪೋಷಕರ ಅಥವಾ ವಯಸ್ಕರ ಪ್ರಭಾವವು ಪ್ರಮುಖ ಅಂಶವಾಗಿದೆ. ಪೋಷಕರು ಅಥವಾ ಇತರ ವಯಸ್ಕರು ಮಗುವಿನೊಂದಿಗೆ ಸಂವಹನ ನಡೆಸಿದಾಗ ಮತ್ತು ಸ್ವೀಕಾರಾರ್ಹ ನಡವಳಿಕೆ ಮತ್ತು ಯಾವುದು ತಪ್ಪು ಎಂದು ಅವರಿಗೆ ತೋರಿಸಿದಾಗ, ಮಗು ಅಪರಾಧ ಮಾಡದ ರೀತಿಯಲ್ಲಿ ವರ್ತಿಸುವ ಸಾಧ್ಯತೆಯಿದೆ. ಮಗುವು ಉತ್ತಮ ವಯಸ್ಕರೊಂದಿಗೆ ಬಾಂಧವ್ಯವನ್ನು ಹೊಂದುವುದು ಬಹಳ ಮುಖ್ಯ, ಅವರು ತಮ್ಮ ಕ್ರಿಯೆಗಳ ಮೇಲೆ ಪ್ರಭಾವ ಬೀರುತ್ತಾರೆ ಮತ್ತು ಯಾವುದು ಸರಿ ಮತ್ತು ಯಾವುದು ತಪ್ಪು ಎಂಬುದರ ನಡುವಿನ ವ್ಯತ್ಯಾಸವನ್ನು ತೋರಿಸುತ್ತದೆ.

**ಆರ್ಥಿಕ ಅಂಶಗಳು**

ಬಡತನ ಮತ್ತು ನಿರುದ್ಯೋಗ, ವಸ್ತು ಕೊರತೆಗಳು, ಭೌತಿಕ ವಸ್ತುಗಳ ಅತಿಯಾದ ಅವಲಂಬನೆ, ಮಾನಸಿಕ ನ್ಯೂನತೆ ಮತ್ತು ಉನ್ನತ ಬುದ್ಧಿವಂತಿಕೆ, ಅಪೌಷ್ಟಿಕತೆ. ಸಹಜತೆ ಮತ್ತು ಭಾವನೆಗಳ ವೈಪರೀತ್ಯಗಳು, ಅಸಮ ಮಾನಸಿಕ ಬೆಳವಣಿಗೆ, ಅನಿಯಮಿತ ಉದ್ಯೋಗ, ಔದ್ಯೋಗಿಕ ತಪ್ಪು, ಬಿಡುವಿನ

ಸಮಯ ಮತ್ತು ಆಲಸ್ಯ, ಅಸಡ್ಡೆ, ಕಾರ್ಖಾನೆಯ ಪ್ರಭಾವ, ಏಕತಾನತೆ ಮತ್ತು ಸಂಯಮ, ಶಿಷ್ಯವೃತ್ತಿ ವ್ಯವಸ್ಥೆಯಲ್ಲಿ ಕುಸಿತ, ಆಲಸ್ಯ ಮತ್ತು ಸೋಮಾರಿತನ ಅಭ್ಯಾಸ ಮತ್ತು ಸಹವಾಸ ಮಾದಕ ವ್ಯಸನದ ಸಂಕೀರ್ಣತೆ, ಭಾವನಾತ್ಮಕತೆಯಲ್ಲಿ ಕೀಳರಿಮೆ ಅಭ್ಯಾಸಗಳು ಮತ್ತು ಅನುಭವಗಳು ಭಾರತದಲ್ಲಿನ ಅಧ್ಯಯನಗಳು ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳು ಸಂದರ್ಭೋಚಿತ, ವೈಯಕ್ತಿಕ ಮತ್ತು ಸಾಂದರ್ಭಿಕ ಅಂಶಗಳ ಪರಸ್ಪರ ಕ್ರಿಯೆಯ ಪರಿಣಾಮವಾಗಿದೆ ಎಂದು ಸೂಚಿಸಿದೆ. ಕುಟುಂಬದೊಳಗಿನ ಈ ಕೆಲವು ಅಂಶಗಳು ಕ್ರಿಮಿನಲ್ ಪೋಷಕರೊಂದಿಗೆ ವಾಸಿಸುವುದು, ಕಠಿಣ ಶಿಸ್ತು, ದೈಹಿಕ ನಿಂದನೆ ಮತ್ತು ನಿರ್ಲಕ್ಷ್ಯ, ಕಳಪೆ ಕುಟುಂಬ ನಿರ್ವಹಣೆ ಅಭ್ಯಾಸಗಳು, ಮಗುವಿನೊಂದಿಗೆ ಕಡಿಮೆ ಮಟ್ಟದ ಪೋಷಕರ ಒಳಗೊಳ್ಳುವಿಕೆ, ಹೆಚ್ಚಿನ ಮಟ್ಟದ ಕೌಟುಂಬಿಕ ಸಂಘರ್ಷ, ಹಿಂಸಾಚಾರಕ್ಕೆ ಅನುಕೂಲಕರವಾದ ಪೋಷಕರ ವರ್ತನೆಗಳು ಮತ್ತು ಕುಟುಂಬದಿಂದ ಬೇರ್ಪಡುವಿಕೆ.

**ಉಪಸಂಹಾರ**

ಪ್ರತಿ ಮಗುವು ತನ್ನ ಪೂರ್ಣಸಾಮರ್ಥ್ಯಗಳ ಮೂಲಕ ಸಾಧಿಸುವ ಅಂತರ್ಗತ ಸಾಮರ್ಥ್ಯ ಹೊಂದಿದ್ದು, ಸಕಾರಾತ್ಮಕವಾಗಿ ರಾಷ್ಟ್ರ ಹಾಗೂ ಸಮಾಜಕ್ಕೆ ಕೊಡುಗೆಯಾಗಿ ನೀಡಲು ಬಯಸುತ್ತದೆ. ಭಾರತದ ಸಂವಿಧಾನವು ಮಕ್ಕಳ ರಕ್ಷಣೆ ಮತ್ತು ಯೋಗ ಕ್ಷೇಮಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡುತ್ತದೆ. ಬಾಲ ನ್ಯಾಯ ಕಾಯ್ದೆ 2015ರಲ್ಲಿ ಅಂಗೀಕರಿಸಿ ಇದರ ಮೂಲಕ "ಮಕ್ಕಳ ಸ್ನೇಹಿ ವಿಧಾನವನ್ನು' ಅಳವಡಿಸಿಕೊಳ್ಳುವ ಮೂಲಕ ಸಮಗ್ರ ವಿಧಾನವನ್ನು ಅಳವಡಿಸಿಕೊಂಡು ಕಠಿಣ ಪರಿಸ್ಥಿತಿಗಳಲ್ಲಿ ಮಕ್ಕಳ ಸರಿಯಾದ ಆರೈಕೆ, ರಕ್ಷಣೆ, ಅಭಿವೃದ್ಧಿ ಚಿಕಿತ್ಸೆ, ಸಾಮಾಜಿಕ ಮರು ಏಕೀಕರಣದ ಮೂಲಕ ಮಕ್ಕಳ ಹಕ್ಕುಗಳನ್ನು ರಕ್ಷಿಸುವ ವಿಧಾನಗಳನ್ನು ಅಳವಡಿಸಿಕೊಂಡಿದೆ. ಬಾಲ ನ್ಯಾಯ ಕಾಯ್ದೆಯ ಸರಿಯಾದ ಅನುಷ್ಠಾನ ಮತ್ತು ತಿದ್ದುಪಡಿಗಳ ಮೂಲಕ ಮಾತ್ರ ಮಕ್ಕಳ ಅಪರಾಧಗಳನ್ನು ತಡೆಯಲು ಸಾಧ್ಯವಿಲ್ಲ. ಪೋಷಕರು ಮತ್ತು ಪೋಷಕರಿಂದ ಅಪರಾಧಗಳನ್ನು ಒಳಗೊಂಡಿರುವ ವಿವಿಧ ಕಾರಣಗಳ ಬಗ್ಗೆ ಅರಿವು ಮೂಡಿಸುವುದು ಮುಖ್ಯವಾಗಿದೆ. ಅಪರಾಧಗಳಲ್ಲಿ ತೊಡಗಿರುವ ಮಕ್ಕಳು ಮಾತ್ರ ಅಪರಾಧಿಗಳಲ್ಲ; ವಾಸ್ತವವಾಗಿ, ಅವರು ಕೆಲವು ಸಂದರ್ಭಗಳಲ್ಲಿ ಸಮಾಜದ ಬಲಿಪಶುಗಳಾಗಿದ್ದಾರೆ. ಮನೆಯಲ್ಲಿ ಮತ್ತು ಶಾಲೆಯಲ್ಲಿ ವಿಶೇಷ ಕಾಳಜಿ ವಹಿಸಿದರೆ ಬಾಲಾಪರಾಧವನ್ನು ಆರಂಭಿಕ ಹಂತದಲ್ಲೇ ನಿಲ್ಲಿಸಬಹುದು. ಮಗುವಿನ ಮನಸ್ಸನ್ನು ಬೆಳೆಸುವಲ್ಲಿ ಪೋಷಕರು ಮತ್ತು ಶಿಕ್ಷಕರು ಪ್ರಮುಖ ಪಾತ್ರ ವಹಿಸುತ್ತಾರೆ. ಅವರನ್ನು ಅಪರಾಧಿಗಳು ಅಥವಾ ಅಪರಾಧಿಗಳು ಎಂದು ಲೇಬಲ್ ಮಾಡುವ ಬದಲು, ಮಕ್ಕಳ ಅಗತ್ಯಗಳನ್ನು ಅರ್ಥಮಾಡಿಕೊಳ್ಳಲು ಪ್ರಾಮುಖ್ಯತೆಯನ್ನು ನೀಡಬೇಕು ಮತ್ತು ಅವರಿಗೆ ಮಾರ್ಪಾಡು ಮಾಡುವ ವ್ಯಾಪ್ತಿಯನ್ನು ನೀಡಬೇಕು. ಇತರ ಅನೇಕ ಸಾಮಾಜಿಕ ಸಮಸ್ಯೆಗಳಂತೆ ಮಕ್ಕಳ ಅಪರಾಧದ ಸಮಸ್ಯೆಯು ನಮ್ಮ ಸಮಾಜದ ಅಪೂರ್ಣತೆಗಳು ಮತ್ತು ಅಸಮರ್ಪಕ ಹೊಂದಾಣಿಕೆಗಳೊಂದಿಗೆ ಸಂಬಂಧ ಹೊಂದಿದೆ.

**ಪರಾಮರ್ಶನ ಗ್ರಂಥಗಳು**


- ಕುಸುಮ್. (1979). ಜುವೆನೈಲ್ ಡೆಲಿನ್ಕ್ವೆನ್ಸಿ–ಎ ಸೋಶಿಯೋ–ಲೀಗಲ್ ಸ್ಟಡಿ. ಕೆಎಲ್ಎಂ ಬುಕ್ ಹೌಸ್, ನವದೆಹಲಿ.

- ದಾಸ್ ಪಿ ಸಿ. (1979). ಜುವೆನೈಲ್ ಡೆಲಿನ್ಕ್ವೆನ್ಸಿ – ಕಾರಣವಾಗುವ ಅಂಶಗಳ ಗುರುತಿಸುವಿಕೆಯ ಅಧ್ಯಯನ ವಿಶೇಷವಾಗಿ ಅಸ್ಸಾಂನ ಉಲ್ಲೇಖದೊಂದಿಗೆ. ಶಿಕ್ಷಣ ಸಂಶೋಧನೆಯ ಎರಡನೇ ಸಮೀಕ್ಷೆ. ಬುಚ್, ಎಂ.ಬಿ. (ಸಂ.), ಸೊಸೈಟಿ ಫಾರ್ ಎಜುಕೇಷನಲ್ ರಿಸರ್ಚ್ & ಡೆವಲಪ್‌ಮೆಂಟ್, ಪುಟ.94.
- ಪ್ರಸಾದ್, ಬಿ.ಡಿ. ಮತ್ತು ಹರ್ನಾಶ್, ಎಸ್. (1995). ಜುವೆನೈಲ್ ಹೋಮ್ ಕೈದಿಗಳು: ಹಿನ್ನೆಲೆಯ ಗುಣಲಕ್ಷಣಗಳು. ಇಂಡಿಯನ್ ಜರ್ನಲ್ ಆಫ್ ಸೋಶಿಯಲ್ ವರ್ಕ್.
- ಬೆಕರ್, ಜಿ. (1968). ಕ್ರೈಂ ಆಂಡ್ ಪನೀಸ್ಮೆಂಟ್: ಎಕಾನಮಿಕ್ ಅಪ್ರೋಚ್, ಜರ್ನಲ್ ಆಫ್ ಪೊಲಿಟಿಕಲ್ ಎಕಾನಮಿ, ದಿ ಯೂನಿವರ್ಸಿಟಿ ಆಫ್ ಚಿಕಾಗೋ ಪ್ರೆಸ್ 76(2), ಪು.ಸಂ.169–217.
- ಭಾರತ ಸರ್ಕಾರ. (2021). ಭಾರತದಲ್ಲಿ ಅಪರಾಧ, ರಾಷ್ಟ್ರೀಯ ಅಪರಾಧ ದಾಖಲೆ ಬ್ಯೂರೋ. ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳು, ಗೃಹ ವ್ಯವಹಾರಗಳ ಸಚಿವಾಲಯ.
- ಮೊಫಿಟ್, ಟಿ ಇ. (1993). ಅಡೋಲೆಸೆನ್ಸ್ ಲಿಮಿಟೆಡ್ ಮತ್ತು ಲೈಫ್–ಕೋರ್ಸ್–ಫರ್‌ಸಿಸ್ಟೆಂಟ್ ಎಚಿಟಿ ಸೋಷಿಯಲ್ ಬಿಯೆವಿಯರ್: ಎ ಡೆವಲಪ್ಮೆಂಟಲ್ ಟ್ಯಾಕ್ಸಾನಮಿ. ಸೈಕಲಾಜಿಕಲ್ ರಿವ್ಯೂ, 100, 4, ಪು.ಸಂ.674–701.
- ರಾಮ್ ಅಹುಜಾ. (1997). ಭಾರತದಲ್ಲಿ ಸಾಮಾಜಿಕ ಸಮಸ್ಯೆಗಳು. ರಾವತ್ ಪ್ರಕಾಶನ, ಜೈಪುರ.
- ವೆದರ್ಬರ್ನ್ ಡಿ. ಮತ್ತು ಲಿಂಡ್ ಬಿ. (1997). ಸಾಮಾಜಿಕ ಮತ್ತು ಆರ್ಥಿಕ ಒತ್ತಡ, ಮಕ್ಕಳ ನಿರ್ಲಕ್ಷ್ಯ ಮತ್ತು ಜುವೆನೈಲ್ ಅಪರಾಧ. ಎನ್‌ಎಸ್‌ಡಬ್ಲೂ ಬ್ಯೂರೋ ಆಫ್ ಕ್ರೈಮ್ ಸ್ಟ್ಯಾಟಿಸ್ಟಿಕ್ಸ್ ಅಂಡ್ ರಿಸರ್ಚ್, ಅಟಾರ್ನಿ ಜನರಲ್ ಇಲಾಖೆ, (ಸಿಡ್ನಿ). ಪುಟ ಸಂ.7–8
- ಹೊವಾರ್ಡ್ ಬೆಕರ್ ಔಟ್‌ಸೈಡರ್ಸ್. (1963). ಸ್ಟಡೀಸ್ ಇನ್ ದಿ ಸೋಷಿಯಾಲಜಿ ಆಫ್ ಡಿವಿಯನ್ಸ್. ನ್ಯೂಯಾರ್ಕ್: ಫ್ರೀ ಪ್ರೆಸ್.